244(559) ಶ್ರೀ ಶ್ರೀರಾಮ ರೆಡ್ಡಿ ಜೆ ವಿ (ಬಾಗೇಪಲ್ಲಿ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಹಕಾರ ಬ್ಯಾಂಕುಗಳಲ್ಲಿನ ರೈತರ ಸಾಲಮನ್ನಾ ಮತ್ತು ಬಡ್ಡಿ ಮನ್ನಾ ಕಾರ್ಯಕ್ರಮಗಳಿಗಾಗಿ ಸರ್ಕಾರ ಬರಿಸಿರುವ ಹಣವೆಷ್ಟು?

ಆ) ಸಹಕಾರಿ ಬ್ಯಾಂಕುಗಳಲ್ಲಿನ ಸಾಲ ಮನ್ನಾ ಹಾಗೂ ಬಡ್ಡಿ ಮನ್ನಾದಿಂದ ಪ್ರಯೋಜನ ಪಡೆದಿರುವ ರೈತರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಜಿ ಟಿ ದೇವೇಗೌಡ

ಅ) ಇತ್ತೀಚೆಗೆ ಸರಕಾರವು ಮಾಡಿರುವ ರೈತರ ಸಾಲ ಮನ್ನಾ ಬಡ್ಡಿ ಮನ್ನಾ ಯೋಜನೆಯ ಕಾರ್ಯಕ್ರಮದಡಿ ಇದುವರೆಗೆ ರೂ 750 00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ 2007–08 ನೇ ಸಾಲಿನ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಇನ್ನೂ 250 00 ಕೋಟಿಗಳ ಲಬ್ಯವಿರುತ್ತದೆ

ಆ) ಸಾಲ ಸಾಲ ಮನ್ನಾ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದುಕೊಂಡಿರುವ ರೈತರ ಸಂಖ್ಯೆ 1045286 ಜಿಲ್ಲಾವಾರು ವಿವರವನ್ನು ಲಗತ್ತಿಸಿದೆ ಅಂತಿಮ ಬಿಲ್ಲುಗಳು ಬಂದ ನಂತರ ಈ ಸಂಖ್ಯೆಯಲ್ಲಿ ಬದಲಾವಣೆ ಆಗಬಹುದು

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 559 ಕ್ಕೆ ಸಂಬಂಧಿಸಿದಂತೆ ಅನುಬಂಧ

ಕ್ರ.ಸಂ	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ಸಾಲ ಮನ್ನಾ ಯೋಜನೆಯಡಿಯಲ್ಲಿ ಲಾಭ ಪಡೆದುಕೊಂಡಿರುವ ಸಾಲಗಾರರ ಸಂಖ್ಯೆ
1	ಬೆಂಗಳೂರು	24070
2	ಕೋಲಾರ	1516
3	ಚಿತ್ರದುರ್ಗ	15648
4	ಶಿವಮೊಗ್ಗ	50541
5	ದಾವಣಗೆರೆ	48957
6	ತುಮಕೂರು	25881
7	ಮೈಸೂರು	31583
8	ಮಂಡ್ಯ	54720
9	ಹಾಸನ	39775
10	ದಕ್ಷಿಣ ಕನ್ನಡ	55205
11	ಕೊಡಗು	26628
12	ಚಿಕ್ಕಮಗಳೂರು	14214
13	ಬೆಳಗಾವಿ	181352
14	ಬಿಜಾಪುರ	101255
15	ಬಾಗಲಕೋಟೆ	109535
16	ಧಾರವಾಡ	40278
17	ಕೆನರಾ ಸಿರಸಿ	44279

18	ಗುಲ್ಬರ್ಗಾ	41367
19	ಬೀದರ್	76099
20	ರಾಯಚೂರು	35693
21	ಬಳ್ಳಾರಿ	26690
	ಒಟ್ಟು	**1045286**

ಒಟ್ಟಾರೆಯಾಗಿ ರಾಜ್ಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ 1044290 ರೈತ ಸದಸ್ಯರು ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ವತಿಯಿಂದ 996 ಸದಸ್ಯರು ಸಾಲಮನ್ನಾ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ

245(561) ಶ್ರೀ ಶ್ರೀರಾಮ ರೆಡ್ಡಿ (ಬಾಗೇಪಲ್ಲಿ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪಡಿತರ ವಿತರಣೆಯಲ್ಲಿ ಯೂನಿಟ್ ಪದ್ಧತಿ ಅಳವಡಿಸಿರುವದರಿಂದ ಬಡ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಯೂನಿಟ್ ಪದ್ಧತಿಯನ್ನು ಸ್ಥಗಿತಗೊಳಿಸಲು ಇಚ್ಛಿಸಿದೆಯೇ?

ಇ) ಹಾಗಿದ್ದಲ್ಲಿ ಸರಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?